ದಿನಾಂಕಃ 14.02.2020 ರಂದು ಸಾಕ್ಷಿಯನ್ನು ಪುನಃ ಮಧ್ಯಾಹ್ನ 3.00 ಗಂಟೆಗೆ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ

ಓ ಎಸ್ 272/2009 ರಲ್ಲಿ ಪ್ರಸ್ತುತ ದಾವೆಯ 1 ಮತ್ತು 2 ನೇ ಪ್ರತಿವಾದಿಗಳು ಮತ್ತು ಬೀರಮ್ಮರವರ ಮಗ ಮಹಾದೇವರವರು ಹೇಳಿಕೆಗಳನ್ನು ನೀಡಿದ್ದಾರೆ ಎಂದರೆ ಸರಿ. ಸದರಿಯವರು ಒಟ್ಟು 64

ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಹೌಸ್ ಲೀಸ್ಟ್ ನಂಃ **31** ಒಟ್ಟು **5** ಹಿಸ್ಸೆಗಳಾಗಿವೆ ಎಂದರೆ ಸರಿಯಲ್ಲ. ಹೌಸ್ ಲೀಸ್ಟ್ **31/1** ಎ ನನ್ನ ಚಿಕ್ಕಮ್ಮ ಚಂದ್ರಮ್ಮ ರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಹೌಸ್ ಲೀಸ್ಟ್ ನಂಃ **31/1** ಬಿ ಪಂಕಜಮ್ಮ ರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಹೌಸ್ ಲೀಸ್ಟ್ ನಂಃ **31/2** ಪ್ರತಿವಾದಿ **2** ರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಹೌಸ್ ಲೀಸ್ಟ್ ನಂಃ **31/2** ಎ **3** ನೇ ಪ್ರತಿವಾದಿ ರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಹೌಸ್ ಲೀಸ್ಟ್ ನಂಃ **31/2** ಬಿ **1** ನೇ ಪ್ರತಿವಾದಿ ರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿಯವರುಗಳ ಯಾವ ವರ್ಷ ಗ್ರಾಮ ಪಂಚಾಯಿತಿಯವರೊಂದಿಗೆ ಶಾಮೀಲಾಗಿ ಖಾತೆಗಳನ್ನು ಮಾಡಿಸಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಯಾವ ಇಸವಿಯಲ್ಲಿ ಸದರಿಯವರುಗಳು ಕಾನೂನು ಬಾಹಿರವಾಗಿ ಕಟ್ಟಡಗಳನ್ನು ನಿರ್ಮಾಣಮಾಡುತ್ತಿದ್ದರು ಎಂದರೆ **2009** ರಲ್ಲಿ ಮಾಡುತ್ತಿದ್ದರು. ಈ ವಿಚಾರವಾಗಿ ಪೋಲೀಸರಿಗೆ ದೂರನ್ನು ನೀಡಿರುತ್ತೀರಾ ಎಂದರೆ ದೂರನ್ನು ನೀಡಿ ಕಟ್ಟಡ ಕಟ್ಟುವುದನ್ನು ನಿಲ್ಲಿಸಿರುತ್ತೇನೆ. ಯಾರ ವಿರುದ್ಧ ದೂರನ್ನು ಸಲ್ಲಿಸಿರುತ್ತೀರಾ ಎಂದರೆ ಅಣ್ಣಯ್ಯಚಾರ್, ಬೀರಮ್ಮ, ಪುಟ್ಟಚಾರ್, ಗಂಗಾಧರ ಚಾರ್ ರವರ ವಿರುದ್ಧ ಸಲ್ಲಿಸಿರುತ್ತೇನೆ. ಯಾವ ದಿನಾಂಕದಂದು ಆಸ್ತಿಯನ್ನು ಅಳತೆ ಮಾಡಿಸಿರುತ್ತೀರಾ ಎಂದರೆ ನಾವೇ ಸ್ವಾಧೀನದಲ್ಲಿರುವುದರಿಂದ ಅಳತೆಯನ್ನು ಮಾಡಿಸಿರುವುದಿಲ್ಲ. ನನ್ನ ವಾದಪತ್ರದಲ್ಲಿ ಜುಲೈ ಮೊದಲನೇ ವಾರ **2009** ರಲ್ಲಿ ಆಸ್ತಿಯನ್ನು ಅಳತೆ ಮಾಡಿಸಲಾಗಿದೆ ಎಂದು ನಮೂದಿಸಿರುವುದು ಸುಳ್ಳು ಎಂದರೆ ಸರಿ. ಯಾವಾಗ ಪ್ರತಿವಾದಿಗಳು ಅತಿಕ್ರಮೇಣ ಪ್ರವೇಶ ಮಾಡಿರುತ್ತಾರೆ ಎಂದರೆ **2009** ರಲ್ಲಿ ಅತಿಕ್ರಮೇಣ ಪ್ರವೇಶ ಮಾಡಿರುತ್ತಾರೆ ಈ ಬಗ್ಗೆ ದೂರನ್ನು ದಾಖಲಿಸಿದ್ದಿರಾ ಎಂದರೆ ದೂರನ್ನು ನೀಡಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ ಎಂದರೆ ಸರಿ.

ನನ್ನ ತಾತ ಸಿದ್ದಚಾರಿಯವರ ತಮ್ಮನಾದ ಭೈರಚಾರಿಯವರ ಮಗ **1** ನೇ ಪ್ರತಿವಾದಿ ಎಂದರೆ ಸರಿ. ದಾವಾ ಆಸ್ತಿಯಲ್ಲಿ **9** ಕಟ್ಟಡಗಳು ಇವೆ ಎಂದರೆ ಸರಿಯಲ್ಲ. **6** ಕಟ್ಟಡಗಳು ಇರುತ್ತವೆ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾಗಿ ಸಾಕ್ಷಿ ಅದು ದಾವಾ ಸ್ವತ್ತಿನ ಪೋಟೋ ಎಂದು ಗುರುತಿಸಿರುತ್ತಾರೆ. ಆದ್ದರಿಂದ ಸದರಿ ಪೋಟೋವನ್ನು ನಿಡಿ.7 ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಪೋಟೋದಲ್ಲಿ ಕಾಣುತ್ತಿರುವ ನೀಲಿ ಬಣ್ಣದ ಶೆಡ್ ಮತ್ತು ಅದರ ಹಿಂಭಾಗದಲ್ಲಿರುವ ಮನೆಯಲ್ಲಿ **4** ನೇ ಪ್ರತಿವಾದಿ ವಾಸವಾಗಿದ್ದಾರೆ ಎಂದು ಸೂಚಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. ಮುಂದುವರೆದು ದಾವೆಯನ್ನು ಸಲ್ಲಿಸಿದ ನಂತರ ರಾತ್ರೋರಾತ್ರಿ ಶೆಡ್‌ನ್ನು ಹಾಕಿರುತ್ತಾರೆ ಎಂದು ಹೇಳುತ್ತಾರೆ.

ಸಾಕ್ಷಿಗೆ ಇನ್ನೊಂದು ಫೋಟೋವನ್ನು ತೋರಿಸಲಾಗಿ ಸಾಕ್ಷಿ ಅದು ದಾವಾ ಸ್ವತ್ತಿನ ಫೋಟೋ ಎಂದು ಗುರುತಿಸಿರುತ್ತಾರೆ. ಆದ್ದರಿಂದ ಸದರಿ ಫೋಟೋವನ್ನು ನಿಡಿ.8 ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಫೋಟೋದಲ್ಲಿ ಕಾಣುತ್ತಿರುವ ಎರಡು ಮಳಿಗೆಗಳನ್ನು 1 ನೇ ಪ್ರತಿವಾದಿ ಕಟ್ಟಿದ್ದಾರೆಂದು ಸೂಚಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. ಮುಂದುವರೆದು ದಾವೆಯನ್ನು ಸಲ್ಲಿಸಿದ ನಂತರ ರಾತ್ರೋರಾತ್ರಿ ಅಂಗಡಿಗಳನ್ನು ಹಾಕಿರುತ್ತಾರೆ ಎಂದು ಹೇಳುತ್ತಾರೆ.

ಸಾಕ್ಷಿಗೆ ಇನ್ನೊಂದು ಫೋಟೋವನ್ನು ತೋರಿಸಲಾಗಿ ಸಾಕ್ಷಿ ಅದು ದಾವಾ ಸ್ವತ್ತಿನ ಫೋಟೋ ಎಂದು ಗುರುತಿಸಿರುತ್ತಾರೆ. ಆದ್ದರಿಂದ ಸದರಿ ಫೋಟೋವನ್ನು ನಿಡಿ.9 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ಕಾಣುತ್ತಿರುವ ಮಂಜು ಸ್ಟುಡಿಯೋದ ಮಳಿಗೆಯಲ್ಲಿ ನನ್ನ ಚಿಕ್ಕಮ್ಮ ಪಂಕಜಮ್ಮ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ನನ್ನ ಚಿಕ್ಕಪ್ಪ ಚಲುವಚಾರ್ ಸ್ವಾಧೀನದಲ್ಲಿದ್ದಾರೆ ಎಂದು ಹೇಳುತ್ತಾರೆ. ನಿಡಿ.9 ರಲ್ಲಿರುವ ಹಸಿರು ಬಣ್ಣದ ಶೀಟಿನ ಮನೆಯಲ್ಲಿ 1 ನೇ ಪ್ರತಿವಾದಿ ಗಂಗಾಧರ್ ಚಾರ್ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ, ನಮ್ಮ ಸ್ವಾಧೀನದಲ್ಲಿದೆ.

ಸಾಕ್ಷಿಗೆ ಇನ್ನೊಂದು ಫೋಟೋವನ್ನು ತೋರಿಸಲಾಗಿ ಸಾಕ್ಷಿ ಅದು ದಾವಾ ಸ್ವತ್ತಿನ ಫೋಟೋ ಎಂದು ಗುರುತಿಸಿರುತ್ತಾರೆ. ಆದ್ದರಿಂದ ಸದರಿ ಫೋಟೋವನ್ನು ನಿಡಿ.10 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ಕಾಣುತ್ತಿರುವ ಮನೆಯಲ್ಲಿ 3 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಅದನ್ನು ಅಕ್ರಮವಾಗಿ ಕಟ್ಟಿಕೊಂಡಿರುತ್ತಾರೆ ನಿಡಿ.10 ರಲ್ಲಿರುವ ಪೆಟ್ಟಿಗೆ ಅಂಗಡಿ ಮತ್ತು ಖಾಲಿ ಜಾಗ 3 ನೇ ಪ್ರತಿವಾದಿಯ ತಮ್ಮ ರವರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ, ಅದು ಒಂದೇ ಸ್ವತ್ತಾಗಿದ್ದು ಅಕ್ರಮವಾಗಿ ಅಣ್ಣತಮ್ಮಂದಿರಿಬ್ಬರು ವಿಭಾಗ ಮಾಡಿಕೊಂಡಿದ್ದಾರೆ. ನಿಡಿ.10 ರಲ್ಲಿ ಮನೆ ಇರುವ ಖಾಲಿಜಾಗವನ್ನು ನನ್ನ ತಂದೆ ಮತ್ತು ಚಿಕ್ಕಪ್ಪ ಮೀನಾ ಭಾಸ್ಕರ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿಯವರಿಗೆ ಮಾರಾಟ ಮಾಡಿರುವ ಜಮೀನಿನ ಸರ್ವೆ ನಂಃ 30 ಆಗಿರುತ್ತದೆ. ಸದರಿ ಆಸ್ತಿಯನ್ನು ಮೀನಾ ಭಾಸ್ಕರ್ ರವರಿಂದ ಎಕ್ಬಾಲ್ ಪಾಷ್ ರವರು ಖರೀದಿಸಿ ಅವರು ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿ. ನಿಡಿ.10 ರಲ್ಲಿ ಕಾಣಿಸುತ್ತಿರುವ ಮನೆಯ ಎಡಭಾಗಕ್ಕೆ ಇರುವ ಖಾಲಿ ಜಾಗವನ್ನು ನನ್ನ ಚಿಕ್ಕಮ್ಮ ದ್ರಾಕ್ಷಿಯಿಣಿ ಸ್ವಾಧೀನದಲ್ಲಿದ್ದು ಅದನ್ನು ಕೆ ಹೆಚ್ ಪುಟ್ಟಣ್ಣಶೆಟ್ಟಿ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದರ ಸರ್ವೆ ನಂಃ 30 ಅಗಿರುತ್ತದೆ. ಅದನ್ನು ನನ್ನ ತಾತ ಬೆಟ್ಟಚಾರ್ ರವರಿಂದ ಖರೀದಿಸಿದ್ದರು. ದ್ರಾಕ್ಷಿಯಿಣಿರವರು ಮಾರಾಟ ಮಾಡಿರುವ ಆಸ್ತಿಯ ದಕ್ಷಿಣಕ್ಕೆ ಬೆಟ್ಟಚಾರ್ ರವರು ಇರುತ್ತಾರೆ

ಎಂದರೆ ಸರಿ. ದಾವಾ ಆಸ್ತಿಯಲ್ಲಿ ದಕ್ಷಿಣದ ಚಕ್ಕುಬಂಧಿಯನ್ನು ಬೆಟ್ಟಚಾರ್ ಎಂದು ತೋರಿಸಿದ್ದು ಅದರಲ್ಲಿ ಮೇಲೆ ಸೂಚಿಸಿದವರ ಆಸ್ತಿಗಳನ್ನು ಸೇರಿಸಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾವು ಯಾವತ್ತೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಮೇಲೆ ಸೂಚಿಸಿದ ಫೋಟೋಗಳಲ್ಲಿರುವ ಆಸ್ತಿಗಳನ್ನು ಸಂಬಂಧಿಸಿದವರು ಸ್ವಾಧೀನದಲ್ಲಿದ್ದು ನಮೂನೆ **9** ಮತ್ತು **11** ಎ ನ್ನು ಪಡೆದುಕೊಂಡು ಕಂದಾಯವನ್ನು ಪಾವತಿಸಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಅಕ್ರಮವಾಗಿ ಮಾಡಿಕೊಂಡಿರುತ್ತಾರೆ ಫೋಟೋಗಳಲ್ಲಿ ತೋರಿಸಿದ ಆಸ್ತಿಯ ಬೆಲೆ ಒಟ್ಟು **1** ಕೋಟಿ ರೂ ಗಳು ಇರುತ್ತದೆ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು **5** ಲಕ್ಷ **25** ಸಾವಿರ ಎಂದು ಸುಳ್ಳು ಮೌಲ್ಯ ಮಾಡಿದ್ದೇನೆ ಎಂದರೆ ಸರಿಯಲ್ಲ. ಒಂದು ಚದರ ಮೀಟರ್ ಗೆ **10** ಸಾವಿರ ರೂ ಬೆಲೆ ಇದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ **1** ಮತ್ತು **3** ರವರಿಗೆ ತೊಂದರೆ ಕೊಡಬೇಕಾದ ಉದ್ದೇಶದಿಂದ ದಾವೆಯನ್ನು ತಂದಿದ್ದೇನೆ ಎಂದರೆ ಸರಿಯಲ್ಲ. ಕ್ರಯಪತ್ರಗಳಲ್ಲಿ ನಮೂದಾಗಿರುವ ವಿಸ್ತೀರ್ಣ ಗಳ ಆಸ್ತಿಗಳಿಗೆ ನಾನಗಾಗಲೀ ನನ್ನ ತಂದೆಗಾಗಲೀ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ, ಆಸ್ತಿ ನಮ್ಮದೇ ಆಗಿರುತ್ತದೆ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.